# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 656 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿ ಕೋಲಾರ ಜಿಲ್ಲೆಗೆ ಎಷ್ಟು ವಿದ್ಯುತ್‌ನ್ನು ಉಚಿತವಾಗಿ ನೀಡಲಾಗುತ್ತಿದೆ; (ತಾಲ್ಲೂಕುವಾರು, ಫಲಾನುಭವಿಗಳ ಪಟ್ಟಿಯೊಂದಿಗೆ ಮಾಹಿತಿಯನ್ನು ನೀಡುವುದು) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕೋಲಾರ ಜಿಲ್ಲೆಯಲ್ಲಿ ಒಟ್ಟು 68,656 ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯ ಫಲಾನುಭವಿಗಳಿದ್ದು, ತಾಲ್ಲೂಕುವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ನಿಗದಿತ ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸಿದ್ದಲ್ಲಿ, ಹೆಚ್ಚುವರಿ ಯೂನಿಟ್‌ಗೆ ಎಷ್ಟು ದರವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗುವುದು; | ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಸ್ಥಾವರಗಳಲ್ಲಿ, ಒಂದಕ್ಕಿಂತ ಹೆಚ್ಚು ಪಾಯಿಂಟುಗಳಿದ್ದರೆ ಅಥವಾ ಮಾಸಿಕ ಬಳಕೆಯು 40 ಯುನಿಟ್‌ಗಳು ಮೀರಿದ್ದರೆ, ಅಂತಹ ಸ್ಥಾವರಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಜಕಾತಿ ಆದೇಶದನ್ವಯ ವಿದ್ಯುತ್ ದರ ಅನುಸೂಚಿ ಎಲ್.ಟಿ-2(ಎ) ಜಕಾತಿಯಡಿಯಲ್ಲಿ ಬಿಲ್ ಮಾಡಲಾಗುತ್ತದೆ. ಪೂರ್ಣ ಬಿಲ್ ಮೊತ್ತವನ್ನು ಫಲಾನುಭವಿ ಗ್ರಾಹಕರು ಭರಿಸಬೇಕಾಗುತ್ತದೆ.<br><br>ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ EN 12 PSR 2017 ದಿನಾಂಕ: 29.05.2017 ಪ್ರಕಾರ ಬೆವಿಕಂಪನಿ ವ್ಯಾಪ್ತಿಯಲ್ಲಿ ಮಾಸಿಕ 40 ಯೂನಿಟ್ ವಿದ್ಯುತ್ ಬಳಕೆ ಮಾಡುವ ಬಡತನ ರೇಖೆಗಿಂತ ಕೆಳಗಿರುವ ವಿದ್ಯುತ್ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡುವ ವೆಚ್ಚವನ್ನು ಬೆವಿಕಂಪನಿಗೆ ಸರ್ಕಾರವು ಅನುದಾನದ ಮೂಲಕ ಭರಿಸುತ್ತಿದೆ ಹಾಗೂ ಮಾಸಿಕ 40 ಯೂನಿಟ್‌ಗಳ ಮೀರಿದ ಬಳಕೆಗೆ ಎಲ್.ಟಿ-2(ಎ) ಜಕಾತಿಯಡಿಯಲ್ಲಿ ಪರಿಗಣಿಸಿ ಬಿಲ್ಲು ಮಾಡಲಾಗುತ್ತಿದೆ. 40 ಯೂನಿಟ್‌ಗಳ ವಿದ್ಯುತ್ ಬಳಕೆಯನ್ನು ಒಂದು ತಿಂಗಳ ಅವಧಿಗೆ ಬಳಸಬಹುದಾಗಿದ್ದು, ಬಳಕೆಯು 40 ಯೂನಿಟ್‌ಗಳು ಮೀರಿದಾಗ ಸದರಿ ಸಂಪರ್ಕದಲ್ಲಿ ಹೆಚ್ಚು ವಿದ್ಯುತ್ ಬಳಕೆ ಮಾಡಲಾಗುತ್ತಿದ್ದು ಇದನ್ನು ಬಡತನ ರೇಖೆಯ ವ್ಯಾಪ್ತಿಯಲ್ಲಿ ಪರಿಗಣಿಸಲಾಗುವುದಿಲ್ಲ. ಹಾಗಾಗಿ 40 ಯೂನಿಟ್‌ಗಳು ಮೀರಿದಲ್ಲಿ ಮಾತ್ರ ಸದರಿ ಸಂಪರ್ಕವನ್ನು ಬಡತನ ರೇಖೆಗಿಂತ ಮೇಲೆ ಎಂದು ಪರಿಗಣಿಸಿ ಎಲ್.ಟಿ-2(ಎ) ಜಕಾತಿಯಡಿಯಲ್ಲಿ ಬಿಲ್ ಮಾಡಲಾಗುತ್ತದೆ. |

...2

| | | |
|---|---|---|
| ಇ) | ನಿಗದಿತ ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸಿ ವಿದ್ಯುತ್ ದರ ಸಂದಾಯ ಮಾಡದ ಫಲಾನುಭವಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆಯೇ; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ CoS (Conditions of Supply) ನಿಯಮ 29.06 ರಲ್ಲಿ ತಿಳಿಸಲಾದ ನಿಯಮಗಳಂತೆ ನಿಗದಿತ ಅವಧಿಯಲ್ಲಿ ಫಲಾನುಭವಿಗಳು ವಿದ್ಯುತ್ ಬಾಕಿಯನ್ನು ಪಾವತಿಸದಿದ್ದಲ್ಲಿ ವಿದ್ಯುತ್ ನಿಲುಗಡೆಗೊಳಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಕ್ರಮ ಕೈಗೊಳ್ಳಲಾಗುವುದು.<br><br>ಬೆವಿಕಂಪನಿ ವ್ಯಾಪ್ತಿಯಲ್ಲಿ ನಿಗದಿತ ಯೂನಿಟ್‌ಗಳಿಗಿಂತ ಹೆಚ್ಚು ವಿದ್ಯುತ್ ಬಳಸಿ ವಿದ್ಯುತ್ ಬಿಲ್ಲನ್ನು ಪಾವತಿಸದ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳ ಒಟ್ಟು 22,180 ವಿದ್ಯುತ್ ಸ್ಥಾವರಗಳ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. |
| ಈ) | ಹಾಗಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳು ಕಂಡು ಬಂದಿದೆ; ಇವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? | |

ಸಂಖ್ಯೆ: ಎನರ್ಜಿ 215 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಗೋವಿಂದರಾಜು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:656ಕ್ಕೆ ಅನುಬಂಧ:</u>**

**<u>ಕೋಲಾರ ಜಿಲ್ಲೆಯಲ್ಲಿನ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯ ಫಲಾನುಭವಿಗಳ ತಾಲ್ಲೂಕುವಾರು ವಿವರಗಳು:</u>**

| ತಾಲ್ಲೂಕು ಹೆಸರು | ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ಉಚಿತ ವಿದ್ಯುತ್ ನೀಡಿರುವ ಫಲಾನುಭವಿಗಳ ಸಂಖ್ಯೆ | ಉಚಿತ ವಿದ್ಯುತ್ ನೀಡಿರುವ ಫಲಾನುಭವಿಗಳ ಬಳಕೆ (ಸರಾಸರಿ ಪ್ರತಿಮಾಹೆ) (ಯೂನಿಟ್‌ಗಳಲ್ಲಿ) | ಉಚಿತ ವಿದ್ಯುತ್ ನೀಡಿರುವ ಫಲಾನುಭವಿಗಳ ಬೇಡಿಕೆ (ಸರಾಸರಿ ಪ್ರತಿ ಮಾಹೆ ರೂಗಳಲ್ಲಿ) |
|---|---|---|---|
| ಕೋಲಾರ | 16432 | 417354 | 3946249 |
| ಶ್ರೀನಿವಾಸಪುರ | 13551 | 432365 | 391557 |
| ಕೆ.ಜಿ.ಎಫ್ | 5844 | 100543 | 887299 |
| ಬಂಗಾರಪೇಟೆ | 7942 | 151754 | 1466274 |
| ಮಾಲೂರು | 11551 | 219491 | 1973634 |
| ಮುಳಬಾಗಿಲು | 13336 | 392756 | 3502515 |